ಮಾಡಲಿಲ್ಲವೇಕೆ?'

'ನೀನೂ ಕೂಡ ಮಾಡಿಲ್ಲವಲ್ಲ. ನಿನ್ನ ಪ್ರತಿಕ್ರಿಯೆ ಹೇಗಿರುತ್ತದೆಯೋ ಎಂದು ಯೋಚಿಸಿ ಸುಮ್ಮನಾಗುತ್ತಿದ್ದೆ.'

'ನಾನು ನಿನಗೆ ಫೋನ್ ಮಾಡಿದರೆ ಮಿನಿಸ್ಟ್ರೀ ಆಫ್ ಡಿಫೆನ್ಸ್ ಮತ್ತೆ ನನಗೆ ಈ ಬಗ್ಗೆ ಹೆಚ್ಚಿನ ಪ್ರಶ್ನೆಗಳನ್ನು ಕೇಳಬಹುದು ಎಂದು ನಾನೂ ಯೋಚನೆಗೀಡಾಗಿದ್ದೆ.'

ಇಬ್ಬರೂ ಸುಮ್ಮನಾದರು. ಅಲ್ಲಿಯ ಒಂದೊಂದು ಕ್ಷಣವೂ ಕಾಲಸಮುದ್ರದ ಸುಳಿಯಲ್ಲಿ ಐಕ್ಯವಾಗುತ್ತಲೇ ಇತ್ತು.

'ಚಾಚಾ ಮತ್ತು ಚಾಚಿಜಾನ್ ಕ್ಷೇಮವಾಗಿದ್ದಾರೆ ತಾನೆ?' ಕೇಳಿದ ಸರ್ಫರಾಜ್ ಭಾವಪೂರ್ಣ ಸ್ವರದಲ್ಲಿ.

'ಅಪ್ಪ ಈಗಿಲ್ಲ. ಮತ್ತೆ, ನಿನ್ನ ಮನೆಯಲ್ಲಿ?'

'ಅದೇ, ಅಮ್ಮ, ನಿನ್ನ ಅತ್ತಿಗೆ ಹಾಗೂ ಮಕ್ಕಳು.'

ದೂರ ಮುಗಿಲಿನಲ್ಲಿ ಉರಿಯುತ್ತಿದ್ದ ನಕ್ಷತ್ರಗಳು ಭೂಮಿಯನ್ನು ಧ್ವಂಸ ಮಾಡಲೆಂದು ಕೆಳಗೆ ಬೀಳುತ್ತಿದ್ದವು. ಥಡ್... ಥಡ್ ಥಡ್... ಗುಂಡುಗಳು ಸಿಡಿಯುತ್ತಿದ್ದವು. ಹೊಗೆಯ ಮೋಡಗಳು ಹಿಮದ ಮೇಲೆ ಕಾಲೆಳೆಯುತ್ತಿದ್ದವು.

'ಹುಂ... ವೀರೂ ಇನ್ನು ಮುಂದೇನು ಮಾಡುವೆ?'

'ನಾನು ನಿನ್ನನ್ನು ಬಿಟ್ಟುಬಿಡುವುದು ಸಾಧ್ಯವಿಲ್ಲ, ನೀನು ಶತ್ರು ಸೈನ್ಯದ ಅಧಿಕಾರಿ. ಮತ್ತೆ ನೀನು? ನೀನು ನನಗೇನು ಮಾಡುತ್ತೀಯಾ?

'ಗೆಳೆಯಾ... ನೀನೂ ಕೂಡ ಪಾಕಿಸ್ತಾನದ ಶತ್ರುವೇ ತಾನೆ? ನಾನು ಹೇಗೆ ನಿನ್ನನ್ನು ಹೋಗಲು ಬಿಡಲಿ?'

'ಆಯ್ತು ಹಾಗಿದ್ದರೆ ನೀನು ಟ್ರಿಗರ್ ಎಳೆ, ನಾನೂ ಎಳೆಯುತ್ತೇನೆ. ಹಾರಿಸು ಗುಂಡು...'

'ಹುಂ... ನೀನೂ ಗುಂಡು ಹಾಕು.'

ಒಬ್ಬನ ರಿವಾಲ್ವರ್ ಹಾಗೂ ಇನ್ನೊಬ್ಬ ಎಲ್.ಎಮ್.ಜಿ.ಯ ನಳಿಕೆ ಪರಸ್ಪರರ ಎದೆಗುಂಡಿಗೆಯನ್ನು ಆನಿಸಿದ್ದವು. ಇಬ್ಬರ ಕಣ್ಣುಗಳಲ್ಲಿ ನೈರಾಶ್ಯದ ಸುನಾಮಿಯ ಅಲೆಗಳಿಗೆ ಉಕ್ಕು ಬಂದಿತ್ತು. ಆ ಕ್ಷಣದಲ್ಲಿ ಅವರ ಕೈಗಳು ನಡುಗಿದ್ದವೋ ಇಲ್ಲವೋ ಎಂಬುದು ಬರೀ ಹಿಮಾಲಯಕ್ಕೆ ಹಾಗೂ ಅಲ್ಲಿನ ವೃಕ್ಷಗಳಿಗಷ್ಟೆ ಗೊತ್ತು. ಆದರೆ, ಅವರಿಬ್ಬರ ತುಟಿಗಳ ಮೇಲೆ ಮುಗುಳು ನಗು ಮಾತ್ರ ಝುರಿಯಂತೆ ಚಿಮ್ಮುತ್ತಿತ್ತು. ಇಬ್ಬರು ಕಿಶೋರರು ನಗುತ್ತ ಆಟವಾಡುತ್ತ ಅಪ್ಪಿಕೊಂಡಂತೆ ಕಾಣುತ್ತಿತ್ತು.

ಇಬ್ಬರ ಬೆರಳುಗಳು ಟ್ರಿಗರ್ ಮೇಲೆ ನಿಲ್ಲಲು ಯತ್ನಿಸುತ್ತಿದ್ದವು ಹಾಗೂ ಸಡಿಲಗೊಳ್ಳುತ್ತಿದ್ದವು. ಅಷ್ಟರಲ್ಲಿಯೇ ಎರಡು ಧ್ವನಿಗಳು ಒಮ್ಮೆಲೆ ಹೊರಟವು. 'ಲೇ ದೋಸ್ತ ಗುಂಡು ಸಿಡಿಸೋ...'

ಇಬ್ಬರೂ ಕಣ್ಣು ಮುಚ್ಚಿಕೊಂಡರು. ಕೈಗಳು ಆಯುಧಗಳನ್ನು ಬೀಸಾಕಿದವು ಹಾಗೂ ಒಬ್ಬರಿಗೊಬ್ಬರು ಬಿಗಿದಪ್ಪಿಕೊಂಡರು.

'ನಾವು ಭೇಟಿಯಾದೆವು. ಆದರೆ, ಇಂಥ ಇಕ್ಕಟ್ಟಿನ ಸ್ಥಿತಿಯಲ್ಲಿ?' ಸರ್ಫರಾಜ್‌ನ ಗಂಟಲ ಸೆರೆಗಳು ಉಬ್ಬಿದ್ದವು.

'ಎತ್ತು, ರೈಫಲ್ ಎತ್ತಿಕೊಂಡು ಹೊರಟು ಹೋಗು, ಹಿಂದಿರುಗಿ ನೋಡಬೇಡ' ಎಂದೆನ್ನುತ್ತ ವೀರೇಂದ್ರ ಅವನ ಕಿವಿಯಲ್ಲಿ 'ಹೋಗು... ಗೆಳೆಯಾ ಹೋಗು...' ಎಂದ.